ಹರಪನಹಳ್ಳಿಯಲ್ಲಿ ಮುನ್ಸೀಫ್ ಕೋರ್ಟ್ ಕಟ್ಟಡದ ಕಾರ್ಯ ಪ್ರಾರಂಭಿಸಂವ ಬಗ್ಗೆ

೨೬೬. ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ). – ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮಂತ್ರಿ, ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಮುನ್ಸೀಫ್ ಕೋರ್ಟ್ ಕಟ್ಟಡಕ್ಕೆ ೩–೫ ವರ್ಷಗಳ ಹಿಂದೆ ಶಂಕುಸ್ಥಾಪನೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈವರೆಗೂ ಕಟ್ಟಡದ ನಿರ್ಮಾಣ ಕೆಲಸವನ್ನು ಪ್ರಾರಂಭಿಸದಿರಲು ಕಾರಣಗಳೇನು ?

ಇ) ಕಟ್ಟಡದ ಕೆಲಸ ಪ್ರಾರಂಭ ಮಾಡಲು ಸರ್ಕಾರಕ್ಕೆ ಇರುವ ಅಡ್ಡಿಗಳಾವುವು ?

ಈ) ಸರ್ಕಾರದವರು ಈಗಲಾದರೂ ಮುನ್ಸೀಫ್ ಕೋರ್ಟ್ ಕಟ್ಟಡದ ಕೆಲಸವನ್ನು ಪ್ರಾರಂಭಿಸುವರೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಆಹಾರ ಮಂತ್ರಿ, ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಸಚಿವರು). —

ಅ) ಇಲ್ಲ.

ಆ) (ಅ) ದ ಉತ್ತರದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ನಿಧಿಗಳು ಲಭ್ಯವಾಗುವುದಕ್ಕೆ ಒಳಪಟ್ಟು, ನ್ಯಾಯಾಲಯಗಳ ಕಟ್ಟಡಗಳ ನಿರ್ಮಾಣವನ್ನು ಹಂತ ಹಂತವಾಗಿ ಮಾಡಲಾಗುತ್ತಿದೆ. ಬಜೆಟ್‌ನಲ್ಲಿ ಇದರ ಬಗ್ಗೆ ಏರ್ಪಾಡಿರದಿದ್ದುದರಿಂದ ಈ ಕೆಲಸವನ್ನು ಪ್ರಾರಂಭಿಸಲಾಗಿಲ್ಲ.

ಈ) ಸರ್ಕಾರವು, ಈ ವರ್ಷದ ಪೂರಕ ಬಜೆಟ್‌ನಲ್ಲಿ ಈ ಕೆಲಸಕ್ಕಾಗಿ ನಿಧಿಗಳನ್ನು ಒದಗಿಸುವುದನ್ನು ಪರಿಶೀಲಿಸುವುದು.

ಮಾಜಿ ವಿಧಾನಸಭಾ ಸದಸ್ಯರುಗಳಿಗೆ ಉಚಿತ ಬಸ್ ಪಾಸ್ ಬಗ್ಗೆ

೧೨೨೯. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಜಿ ವಿಧಾನ ಸಭಾ ಹಾಗೂ ವಿಧಾನ ಪರಿಷತ್ತಿನ ಸದಸ್ಯರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಉಚಿತವಾಗಿ ಸಂಚರಿಸಲು ಬಸ್ ಪಾಸುಗಳನ್ನು ನೀಡಲಾಗುವುದೇ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಈಗಾಗಲೇ ಕೆಲವು ವರ್ಗದ ಪ್ರಯಾಣಿಕರಿಗೆ ರಿಯಾಯಿತಿ ಸೌಲಭ್ಯ ಕೊಟ್ಟಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವರ್ಷಕ್ಕೆ ಸುಮಾರು ೨೦ ಕೋಟಿ ರೂ. ಗಳ ನಷ್ಟ ಸಂಭವಿಸುತ್ತಿರುವುದರಿಂದ ಮಾಜಿ ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಉಚಿತ ಬಸ್‌ಪಾಸ್ ನೀಡುವ ವಿಚಾರ ಪರಿಶೀಲನೆಯಲ್ಲಿಲ್ಲ.

ರೋಣಿಹಾಳ ಗ್ರಾಮದಲ್ಲಿ ಆರೋಗ್ಯ ಘಟಕ ಸ್ಥಾಪಿಸುವ ಬಗ್ಗೆ

೯೭೩. ಶ್ರೀ ಕೆ. ಎ. ಪಾಟೀಲರು (ಬಸವನ ಬಾಗೇವಾಡಿ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ರೋಣಿಹಾಳ ಗ್ರಾಮದಲ್ಲಿ ಆರೋಗ್ಯ ಘಟಕ ಸ್ಥಾಪಿಸುವ ಸಲುವಾಗಿ ೧೯೭೩ನೇ ಇಸವಿಯಲ್ಲಿ ತಾಲ್ಲೂಕು ಮಂಡಳಿಯಲ್ಲಿ ಹದಿನೈದು ಸಾವಿರ ರೂಪಾಯಿ ಹಣ ಜಮಾ ಮಾಡಿದ್ದು ನಿಜವೇ ?

೨) ಇಲ್ಲಿಯವರೆಗೆ ಆರೋಗ್ಯ ಘಟಕ ಸ್ಥಾಪಿಸದಿರಲು ಕಾರಣವೇನು ? ಹಾಗೂ ಕೈಗೊಂಡಿರುವ ಕ್ರಮಗಳೇನು ?

೩) ಅಲ್ಲಿ ಇಟ್ಟಂತ ಹಣಕ್ಕೆ ಬಡ್ಡಿ ಎಷ್ಟು ಆಗಬಹುದು ?

೪) ಇದರ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕಾರ್ಯಕ್ರಮಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

೧) ಇದು ಕಾಗದ ಪತ್ರಗಳಿಂದ ಸ್ಪಷ್ಟೀಕರಿಸಲ್ಪಟ್ಟಿಲ್ಲ.

೨) ತಾಲ್ಲೂಕು ಅಭಿವೃದ್ಧಿ ಮಂಡಳಿಯು ನಡೆಸುತ್ತಿದ್ದ ಪ್ರಾಥಮಿಕ ಆರೋಗ್ಯ ಘಟಕವನ್ನು ೧೯೮೧ರಲ್ಲಿ ಸರ್ಕಾರವು ವಹಿಸಿಕೊಂಡಿದ್ದು ಅದು ಈಗ ಅಲ್ಲಿ ಕಾರ್ಯನಿರ್ವಹಿಸುತ್ತಿದೆ.

೩) ಉಪ-ಪ್ರಶ್ನೆ ೧ಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

೪) ಈಗಾಗಲೇ ಒಂದು ಪ್ರಾಥಮಿಕ ಆರೋಗ್ಯ ಘಟಕ ಅಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಮತ್ತೊಂದು ಪ್ರಾಥಮಿಕ ಆರೋಗ್ಯ ಘಟಕ ಸ್ಥಾಪನೆಯ ಪ್ರಶ್ನೆ ಉದ್ಭವಿಸುವುದಿಲ್ಲ.

Ministers are acting in the feature film.

1196. SRI M. SHIVANNA.—Will the Chief Minister be pleased to state.

a) is it true that the Ministers are acting in one of the feature film ?

b) if so, what is the title of the film and who are all the Ministers acting ?

c) who is bearing the cost of production of this film ?

d) what is the reason for production of the film starring the Ministers.

SRI RAMAKRISHNA HEGDE (Chief Minister).—

a) Yes.

b) "Avasthe" Kannada feature film in colour. Following Ministers have acted.

1) Shri Abdul Nazeer Sab.

2) Shri J. H. Patel

c) M/s. Chiguru Movies, Chamarajpet, Bangalore.

d) It is a production by a private firm. Government has no connection with this. Hence the question of any reason does not arise.